ಪ್ರಸ್ತಾವನೆಗಳನ್ನು ಕಳುಹಿಸಿದ್ದೇನೆ. ಜಿಲ್ಲಾ ಪಂಚಾಯತ್‌ನಿಂದ ಕೂಡ ರೆಕಮೆಂಡ್ ಆಗಿ ಬಂದಿದೆ. ಆದರೂ ಕೂಡ ಇದು ಬಹಳ ಲೇಟ್ ಆಗಿದೆ. ಆದ್ದರಿಂದ ತಾವು ಪರ್ಟಿಕ್ಯುಲರ್ ಆಗಿ ಯಾವ ತಾಲ್ಲೂಕು ತೆಗೆದುಕೊಳ್ಳುತ್ತೇವೆಂದು ತಾವು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಆ ತರಹ ಇನ್ನೂ ನಾವು ಯಾವ ತಾಲ್ಲೂಕು ಅಂತ ಗುರುತು ಮಾಡಿಲ್ಲ. ಆದರೆ ಇದು ಇನ್ನೂ ಪ್ರಾರಂಭಿಕ ಹಂತದಲ್ಲಿ ಇರುವುದರಿಂದ ನಾವು ಅದನ್ನು ಗುರುತು ಹಚ್ಚುವ ಕೆಲಸವನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಏನು ಮನವಿಯನ್ನು ಮಾಡಿದ್ದಾರೆ ಆ ಪ್ರಕಾರ ಅಲ್ಲಿಗೆ ರೋಗಿಗಳು ಬರುತ್ತಿರುವ ಸಂಖ್ಯೆಗೆ ಅನುಗುಣವಾಗಿ ಅದನ್ನು ಮೇಲ್ದರ್ಜೆಗೇರಿಸಬೇಕಾಗುತ್ತದೆ. ಆ ದೃಷ್ಟಿಯಿಂದ ಅವೆಲ್ಲವನ್ನೂ ನೋಡಿ ನಾವು ಮೇಲ್ದರ್ಜೆಗೇರಿಸುವ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಂಡು ಆ ಸಂದರ್ಭದಲ್ಲಿ ದೊಡ್ಡಬಳ್ಳಾಪುರ ಆಸ್ಪತ್ರೆಯನ್ನು ಗಮನದಲ್ಲಿಟ್ಟುಕೊಂಡು ಮೇಲ್ದರ್ಜೆಗೇರಿಸುವ ಸಂದರ್ಭದಲ್ಲಿ ತಮ್ಮ ಮನವಿಯನ್ನು ಪರಿಗಣನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಹನಕೆರೆ ಗ್ರಾಮದಲ್ಲಿ ಪಿ.ಹೆಚ್.ಇ. ಸೆಂಟರ್ ಅನ್ನು ಮೇಲ್ದರ್ಜೆಗೇರಿಸುವ ಬಗ್ಗೆ.

326(1543) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಹನಕೆರೆ ಗ್ರಾಮದಲ್ಲಿ ಜನಸಂಖ್ಯೆ 10,000 ಇರುವುದರಿಂದ ಪಿಹೆಚ್.ಇ. ಸೆಂಟರ್‌ನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸಲ್ಲಿಸಲಾಗಿದ್ದು ಹಾಗೂ ಹತ್ತು ಬೆಡ್ಡಿನ ಹೆರಿಗೆ ಆಸ್ಪತ್ರೆಯನ್ನು ಸಹ ಪ್ರಾರಂಭ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರ ಈ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆಯೇ?

ಇ) ಹಾಗಿದ್ದಲ್ಲಿ ಈ ಪ್ರಸ್ತಾವನೆಗಳಿಗೆ ಯಾವಾಗ ಅನುಮೋದನೆ ನೀಡಲಾಗುತ್ತದೆ. (ಪೂರ್ಣ ವಿವರ ನೀಡುವುದು).

ಈ) ಈಗಾಗಲೇ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿದ್ದಲ್ಲಿ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು ವಿವರ ನೀಡುವುದು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಪ್ರಸ್ತಾವನೆ ಬಂದಿರುವುದಿಲ್ಲ.

ಅ) ಪ್ರಸ್ತಾವನೆ ಬಂದ ನಂತರ ಪರಿಶೀಲಿಸಿ ಮಾರ್ಗಸೂಚಿಯನ್ವಯ ಅನುದಾನದ ಲಭ್ಯತೆಯನ್ನಾಧರಿಸಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೇ ಪ್ರಶ್ನೆಗೆ ಮಂಡ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹನಕೆರೆ ಗ್ರಾಮದಲ್ಲಿ ಜನಸಂಖ್ಯೆ 10 ಸಾವಿರ ಇರುವುದರಿಂದ ಪಿ.ಹೆಚ್.ಇ ಸೆಂಟರ್‌ನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಮತ್ತು ಅಲ್ಲಿ ಹತ್ತು ಹಾಸಿಗೆಗಳ ಹೆರಿಗೆ ಆಸ್ಪತ್ರೆಯನ್ನೂ ಸಹ ಪ್ರಾರಂಭ ಮಾಡಬೇಕೆನ್ನುವ ಪ್ರಸ್ತಾವನೆ ಸಲ್ಲಿಸಿದ್ದೇನೆ. ಆ ಪ್ರಸ್ತಾವಕ್ಕೆ ಸರ್ಕಾರ ಉತ್ತರವಾಗಿ ಪಂಚಾಯತಿಗೆ ಅವರ ಭಾಗದ ಹಣ ಒಂದು ಲಕ್ಷ ರೂಪಾಯಿಗಳನ್ನು ಕಟ್ಟಬೇಕೆನ್ನುವ ಆದೇಶ ಸರ್ಕಾರದಿಂದ ಬಂದಿರುತ್ತದೆ. ಆದರೆ ಉತ್ತರದಲ್ಲಿ ಪ್ರಸ್ತಾವನೆ ಬಂದಿರುವುದಿಲ್ಲವೆಂದು ಇರುತ್ತದೆ. ಅದರ ಬಗ್ಗೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಆ ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡಬೇಕೆಂದು ಏನು ಹೇಳುತ್ತಿದ್ದಾರೆ ಅದನ್ನು ನಾವು ನಿಯಮಾನುಸಾರ ಪರಿಶೀಲನೆ ಮಾಡುತ್ತೇವೆ. ಈಗಾಗಲೇ ಬಹಳಷ್ಟು ಗೌರವಾನ್ವಿತ ಸದಸ್ಯರು ಈ ಅಪ್‌ಗ್ರೇಡ್ ಮಾಡುವುದಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ; ಅಪ್‌ಗ್ರೇಡ್ ಮಾಡುವಂತಹ ಸಂದರ್ಭದಲ್ಲಿ ಇದನ್ನೂ ಗಮನದಲ್ಲಿಟ್ಟುಕೊಂಡು ನಿಯಮಾನುಸಾರ ಕನ್ಸಿಡರ್ ಮಾಡುತ್ತೇನೆ.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೇ, ಮದ್ದೂರು ತಾಲ್ಲೂಕಿನಲ್ಲಿ ಒಂದು ಆಸ್ಪತ್ರೆ ಇದೆ. ಈ 5 ಕಿ.ಮಿ. ಸುತ್ತಮುತ್ತಲೂ ಯಾವುದೇ ಹೆರಿಗೆ ಆಸ್ಪತ್ರೆ ಇಲ್ಲ. ನಮ್ಮ ಮಂಡ್ಯ ತಾಲ್ಲೂಕಿನಲ್ಲಿ ಆಸ್ಪತ್ರೆ ಯಾವುದೂ ಇಲ್ಲ. ದಯಮಾಡಿ ಅದು ಹೋಬಳಿಯ ಕೇಂದ್ರ ಸ್ಥಾನವಾದ್ದರಿಂದ ಅಲ್ಲಿ ಹೆರಿಗೆ ಆಸ್ಪತ್ರೆಯನ್ನು ಈ ಸಾಲಿನಲ್ಲಿಯೇ ಪ್ರಾರಂಭಿಸಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಡಾ॥ ಅನ್ನದಾನಿ : ಮಾನ್ಯ ಅಧ್ಯಕ್ಷರೇ, ಅದೇ ರೀತಿ ನನ್ನ ಕ್ಷೇತ್ರದಲ್ಲೂ ಕೂಡ ಸುಮಾರು 8 ಸಾವಿರದಿಂದ 9 ಸಾವಿರ ಮತದಾರರು ಇದ್ದಾರೆ ಹಲಗೂರು ಹೋಬಳಿಯಲ್ಲಿ ಮತ್ತು ಸುಮಾರು 15 ಸಾವಿರ ಜನ ಸಂಖ್ಯೆ ಇದೆ. ಇನ್ನೂ ಕೂಡ ಬಹಳ ವರ್ಷಗಳಿಂದ ಪಿಹೆಚ್‌ಸಿ ಇದೆ. ಹೋಬಳಿ ಹೆಡ್ ಕ್ವಾರ್ಟರ್ಸ್ ಅದು, ಅದನ್ನು ಸಿಹೆಚ್‌ಸಿಗೆ ಮೇಲ್ದರ್ಜೆಗೇರಿಸಬೇಕೆಂದು ಹೇಳಿ ಮಾನ್ಯ ಚೆಲುವರಾಯಸ್ವಾಮಿಯವರು ಆರೋಗ್ಯ ಸಚಿವರಾಗಿದ್ದಾಗಲೇ ನಾವು ಒಂದು ಪ್ರಸ್ತಾವನೆಯನ್ನು ಕೊಟ್ಟಿದ್ದೆವು. ಆದರೆ ಅದು ಇವತ್ತಿನವರೆಗೂ ಕೂಡ ಅಪ್ರೂವಲ್ ಮಾಡುವಂತಾದ್ದಕ್ಕೆ ಸರ್ಕಾರ ಗಮನಹರಿಸಲಿಲ್ಲ. ಜೊತೆಗೆ ನರ್ಸ್‌ಗಳು ಇರತಕ್ಕಂಥ ಸಂಖ್ಯೆ ಬಹಳಷ್ಟು ಕಡಿಮೆ ಇದೆ.

ಮಳವಳ್ಳಿ ಆಸ್ಪತ್ರೆಯಲ್ಲಿ ಬಹಳಷ್ಟು ಕಡಿಮೆ ಇದ್ದಾರೆ. ಆದರೆ ಡಾಕ್ಟರ್ಸ್ ಸ್ವಲ್ಪ ಕಡಿಮೆಯಾದರೂ ಪರವಾಗಿಲ್ಲ ನರ್ಸ್‌ಗಳು ಹೆಚ್ಚಾಗಿ ಬೇಕಾಗಿದೆ. ದಯಮಾಡಿ ಸರ್ಕಾರ ಇದರ ಬಗ್ಗೆ ಗಮನಹರಿಸಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಸರ್ಕಾರ 2700 ಪ್ಯಾರಾ ಮೆಡಿಕಲ್ ಸ್ಟ್ಯಾಫ್‌ನ್ನು ತೆಗೆದುಕೊಳ್ಳಬೇಕೆನ್ನುವ ತೀರ್ಮಾನವನ್ನು ಸರ್ಕಾರ ಈಗಾಗಲೇ ತೆಗೆದುಕೊಂಡಿರುವುದರಿಂದ ಆ ನೇಮಕಾತಿಯಾದಾಗ ಈ ಹುದ್ದೆಗಳನ್ನು ತುಂಬುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ. ಅದೇ ರೀತಿ ಮಾನ್ಯ ಎಂ. ಶ್ರೀನಿವಾಸ್‌ರವರು ಏನು ಮೇಲ್ದರ್ಜೆಗೇರಿಸಬೇಕು ಎನ್ನುವ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಪರಿಶೀಲನೆ ಮಾಡಿ ನಾನು ಅದಷ್ಟು ಶೀಘ್ರವಾಗಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಗ್ರಾಮೀಣ ಪ್ರದೇಶದಲ್ಲಿನ ಹರಿಜನರ ವಾರ್ಡುಗಳ ಅಭಿವೃದ್ಧಿ ಬಗ್ಗೆ.

329(691) ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ (ಬೆಳ್ಳಾವಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗ್ರಾಮೀಣ ಪ್ರದೇಶದ ಹರಿಜನ ವಾರ್ಡುಗಳ ಅಭಿವೃದ್ಧಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಆ) ಈ ಸಾಲಿನ ಆಯವ್ಯಯದಲ್ಲಿ ಈ ಕಾರ್ಯಕ್ರಮಗಳನ್ನು ಪೂರೈಸಲು ತೆಗೆದುಕೊಂಡಿರುವ ಕ್ರಮಗಳೇನು (ಸಂಪೂರ್ಣ ವಿವರ ಒದಗಿಸುವುದು)?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) 2006–07ನೇ ಸಾಲಿನ ಲೆಕ್ಕ ಶೀರ್ಷಿಕೆ 2225–01–800–0–01 (ರಾಜ್ಯ ಯೋಜನೆ ಯಡಿಯಲ್ಲಿ ಪರಿಶಿಷ್ಟ ಜಾತಿಯ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಡಿ ರೂ. 1552.95 ಲಕ್ಷಗಳನ್ನು ಒದಗಿಸಲಾಗಿದೆ.

ಆ) 2006–07ನೇ ಸಾಲಿನ ಆಯವ್ಯಯದ ರಾಜ್ಯ ಯೋಜನೆಯಡಿ 27 ಜಿಲ್ಲೆಗಳಿಗೆ ಒಟ್ಟು ರೂ. 1552.95 ಲಕ್ಷಗಳನ್ನು ಒದಗಿಸಲಾಗಿದ್ದು, ವಿಶೇಷ ಘಟಕ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ರಸ್ತೆ, ಚರಂಡಿ, ಕಿರುನೀರು ಸರಬರಾಜು ಮುಂತಾದ ಯೋಜನೆಗಳನ್ನು ಕೈಗೊಂಡು ಪರಿಶಿಷ್ಟ ಜಾತಿಯ ಜನಗಳಿಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಲಾಗಿದೆ.

ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ : ಮಾನ್ಯ ಅಧ್ಯಕ್ಷರೇ, ಉತ್ತರ ಬಂದಿದೆ. 2006–07ನೇ ಸಾಲಿನಲ್ಲಿ 15 ಕೋಟಿ 52 ಲಕ್ಷ 95 ಸಾವಿರ ರೂ. ಒದಗಿಸಲಾಗಿದೆ ಪರಿಶಿಷ್ಟ